ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE:

**ಡಿಜಿಟಲೀಕರಣ** ಇಂಥ ಕ್ರಮ ಇತಿಹಾಸದಲ್ಲೇ ಮೊದಲು | ಕೊರೋನಾ ಕಾರಣ ಬಜೆಟ್ ಪ್ರತಿ ಮುದ್ರಣ ಇಲ್ಲ | ಹಲ್ವಾ ಹಂಚಿಕೆ, ಬಜೆಟ್ ಪ್ರತಿ ಸಾಗಣೆ ಉಸಾಬರಿಯೂ ಇಲ್ಲ

# ಬಜೆಟ್ ಪ್ರತಿ ಮುದ್ರಿಸದೇ ಕೇಂದ್ರ ಬಜೆಟ್ ಮಂಡನೆ

ನವದೆಹಲಿ: ಫೆ.1ರಿಂದ ಆರಂಭವಾಗಲಿರುವ 2021-22ನೇ ಸಾಲಿನ ಕೇಂದ್ರ ಬಜೆಟ್ ಮಂಡನೆ ಸಂಪೂರ್ಣ ಡಿಜಟಲೀಕರಣ (ಕಾಗದ ರಹಿತ) ಆಗಲಿರುವುದು ದೃಢವಾಗಿದೆ. ಕೋವಿಡ್-19 ಕಾರಣಕ್ಕೆ ಇದೇ ಮೊಟ್ಟ ಮೊದಲ ಬಾರಿಗೆ ಬಜೆಟ್ ಪ್ರತಿಗಳ ಮುದ್ರಣ ಮಾಡದಿರಲು ನಿರ್ಧರಿಸಲಾಗಿದೆ. ಇದರ ಬದಲಾಗಿ ಪ್ರತೀ ಸಂಸದರಿಗೆ ಇ-ವ್ಯವಸ್ಥೆ ಮೂಲಕ ಆಯವ್ಯಯ ಮತ್ತು ಆರ್ಥಿಕ ಸಮೀಕ್ಷಾ ವರದಿಯನ್ನು ರವಾನಿಸಲಾಗುತ್ತದೆ ಎಂದು ಕೇಂದ್ರ ವಿತ್ತ ಸಚಿವಾಲಯ ತಿಳಿಸಿದೆ.

ಈ ಮೂಲಕ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬಜೆಟ್ ಪ್ರತಿಗಳ ಅನುಪಸ್ಥಿತಿ, ಹಲ್ವಾ (ಬಜೆಟ್ ಮುದ್ರಿಸಿದ ಸಿಬ್ಬಂದಿಗೆ ಸಿಹಿ ಹಂಚುವ) ಹಂಚಿಕೆ ಇಲ್ಲದೆ ಮತ್ತು ಸಂಪೂರ್ಣ ಡಿಜಟಲೀಕರಣದ ಮೂಲಕ ಮಂಡನೆ ಆಗಲರುವ ಮೊಟ್ಟ ಮೊದಲ ಬಜೆಟ್



ಆಗಿರಲಿದೆ. ಬಜೆಟ್ ಪ್ರತಿಗಳ ಮುದ್ರಣ ಕಾರ್ಯ ಮುಗಿದ ಬಳಿಕ ಖುದ್ದು ಆರ್ಥಿಕ ಸಚಿವರೇ ಮುದ್ರಣಾಲಯಕ್ಕೆ ಭೇಟಿ ನೀಡಿ ಈ ಮಹತ್ಕಾರ್ಯದಲ್ಲಿ ತೊಡಗಿದ ಸಿಬ್ಬಂದಿಗೆ ಹಲ್ವಾ (ಸಿಹಿ) ಹಂಚುತ್ತಿದ್ದರು. ಆದರೆ ಬಜೆಟ್‌ಗಳ ಪ್ರತಿಯನ್ನೇ ಮುದ್ರಿಸದ ಕಾರಣ ಈ ಬಾರಿಯ ಬಜೆಟ್ ಪೂರ್ವದಲ್ಲಿ ಸಿಹಿ ಹಂಚಿಕೆ, ಉತ್ತರಬ್ಲಾಕ್‌ನಿಂದ ಸಂಸತ್ತಿಗೆ ಬಜೆಟ್ ಪ್ರತಿಗಳ ಸಾಗಣೆ ಹಾಗೂ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಪ್ರತಿಗಳನ್ನು ತರುತ್ತಿದ್ದ ಕೆಂಪುಬಣ್ಣದ ಸಾಂಪ್ರದಾಯಿಕ ಬ್ಯಾಗ್ ತರುವ ಅಗತ್ಯವೂ ಇಲ್ಲ.

ಬಜೆಟ್ ಸಿದ್ಧತಾ ಪ್ರಕ್ರಿಯೆ ಹಾಗೂ ಪ್ರತಿಗಳ ಮುದ್ರಣಕ್ಕಾಗಿ 2 ವಾರಗಳ ಕಾಲ 100ಕ್ಕೂ ಹೆಚ್ಚು ಸಿಬ್ಬಂದಿ 15 ದಿನಗಳ ಕಾಲ ಹಗಲಿರುಳು ಕಾರ್ಯ ನಿರ್ವಹಿಸಬೇಕಾಗುತ್ತದೆ. ಆದರೆ ಕೊರೋನಾ ಕಾರಣಕ್ಕೆ ಇಷ್ಟು ಪ್ರಮಾಣದ ಸಿಬ್ಬಂದಿಯನ್ನು ಒಂದೇ ಕಡೆ ಇಟ್ಟುಕೊಳ್ಳಲಾಗದು ಎಂಬುದು ಹಣಕಾಸು ಇಲಾಖೆಯ ಅಂಬೋಣ.

## ಶ್ರೀಮಂತರ ಮೇಲೆ ಕೋವಿಡ್ ಸೆಸ್?

### ಆರ್ಥಿಕ ನಷ್ಟ ಭರಿಸಲು ಕೇಂದ್ರ ಸರ್ಕಾರದಿಂದ ಹೊಸ ಪ್ರಸ್ತಾಪ

ನವದೆಹಲಿ: ಕೋವಿಡ್ ನೀಡಿರುವ ಆರ್ಥಿಕ ಶಾಕ್‌ನಿಂದ ಚೇತರಿಸಿಕೊಳ್ಳಲು ಹೆಣಗಾಡುತ್ತಿರುವ ಕೇಂದ್ರ ಸರ್ಕಾರ, ಈ ಸಮಸ್ಯೆಯಿಂದ ಹೊರಬರಲು, ಭಾರೀ ಶ್ರೀಮಂತರ ಮೇಲೆ ಕೋವಿಡ್ ಸೆಸ್ ಮತ್ತು ಪೆಟ್ರೋಲ್, ಡೀಸೆಲ್ ಮೇಲೆ ಹೆಚ್ಚುವರಿ ಲೆವಿ ವಿಧಿಸುವ ಮೂಲಕ ಶಾಕ್ ಅನ್ನು ವರ್ಗಾಯಿಸಲು ಮುಂದಾಗಿದೆ ಎನ್ನಲಾಗಿದೆ. ಮೂಲಗಳ ಪ್ರಕಾರ ಫೆ.1ರಂದು ಮಂಡನೆಯಾಗಲಿರುವ ಕೇಂದ್ರ ಬಜೆಟ್‌ಗಿಂತ ಕೆಲ ದಿನಗಳ ಮೊದಲು ಇಂಥದ್ದೊಂದು ನಿರ್ಧಾರವನ್ನು ಸರ್ಕಾರ ಪ್ರಕಟಿಸುವ ಸಾಧ್ಯತೆ ಇದೆ.

### ಸೂಪರ್ ರಿಚ್ ಯಾರು?

ಕನಿಷ್ಠ 30 ದಶಲಕ್ಷ ಡಾಲರ್ (225 ಕೋಟಿ ರು.) ಆಸ್ತಿ ಹೊಂದಿರುವವರನ್ನು ಭಾರೀ ಶ್ರೀಮಂತರೆಂದು ಪರಿಗಣಿಸಲಾಗುತ್ತದೆ.

### 10350 ಭಾರೀ ಶ್ರೀಮಂತರು

2019ರ ವರದಿಯೊಂದರ ಪ್ರಕಾರ 10354 ಭಾರೀ ಶ್ರೀಮಂತರಿದ್ದಾರೆ. 2014ಕ್ಕೆ ಹೋಲಿಸಿದರೆ ಶ್ರೀಮಂತರ ಪ್ರಮಾಣ ದ್ವಿಗುಣವಾಗಿದೆ.